# ಕಪ್ಪು-ಸಾಸರು ಹೂವು



ಸಸ್ಯಶಾಸ್ತ್ರದಲ್ಲಿ ಗಾರ್ಡೇನಿಯಾ ಜಾಸ್ಮಿನಾಯ್ಡ್ಸ್, ಗಾರ್ಡೇನಿಯಾ ಅಂಡ್ ಕೇಪ್ ಜಾಸ್ಮಿನ್, ಅರ್ಥ್ ಏಂಜಲ್ಸ್, ಗಾಂಧಾರಾಜ್ ಎಂದು ಹೆಸರನ್ನೊಳಗೊಂಡ ಕಾಫಿ ಗಿಡದ ಕುಲದ ರುಬಿಕೇಸಿಯವು ದಕ್ಷಿಣ ಪೂರ್ವ ಏಷ್ಯಾ ಮೂಲದ್ದು. ಸಾವಿರ ವರ್ಷದ ಹಿಂದೆಯೇ ಚೀನಾದಲ್ಲಿ ಬೆಳೆಯಲಾಗಿತ್ತು. 18ನೇ ಶತಮಾನದ ಮಧ್ಯ ಭಾಗದಲ್ಲಿ ಇಂಗ್ಲಿಷ್ ಗಾರ್ಡನ್ಸ್‌ನಲ್ಲೂ ಬೆಳೆಸುತ್ತಾ ಬಂದಿರುವರು. ಗಿಡದ ಹಸಿರೆಲೆಯೂ ಕಾಫಿ ಗಿಡದಂತೆ ಕಾಣುವುದು.

ಸೂರ್ಯನ ಬೆಳಕು ಹರಿದಂತೆ ಚಹಾ ಕುಡಿವ ಕಪ್ಪು ಸಾಸರ್‌ನಂತೆ ಶ್ವೇತ ವರ್ಣದ ಹೂ ಕಾಣುವುದು. ಮುಂಗಾರಿನ ಪೂರ್ವದ ಬಿಸಿಲು ಮಳೆಗೆ ಯಥೇಚ್ಛವಾಗಿ ಗಿಡದ ತುಂಬೆಲ್ಲಾ ಬಿಡುವ ಹೂವು; 'ನಾನಿನ್ನೂ ಅರಳಲಿಲ್ಲ ಅರಳಲು ಬಾಕಿ ಇರುವೆ' ಎನ್ನುವಂತೆ ವರ್ಷ ಪೂರ್ತಿ ಆಗೀಗ ಒಂದೊಂದೇ ಹೂ ಅರಳುವುದು. ಎಲ್ಲರಿಗೂ ಸಹ್ಯವೆನಿಸುವ ಸುವಾಸನೆ ಇಂದ ಕೂಡಿದೆ. ಮನೆಯ ಕೊಠಡಿಯಲ್ಲಿ ಒಂದು ಹೂ ಇಟ್ಟರೆ ಕೊಠಡಿ ಎಲ್ಲಾ ಘಮ. ಹೂ ಬಾಡಿ ಒಣಗಿದರೂ ಘಮ ಹಾಗೇ ಇರುತ್ತೆ. ವಿಶೇಷವೆಂದರೆ ಗಿಡದಲ್ಲಿ ಹೂ ಅರಳುವ ವೇಳೆ ಸುವಾಸನೆ ಬೀರುತ್ತೆ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ



# ಏಕಶಿಲಾ ಶೇಷಶಯ್ಯ

ಮಧ್ಯಪ್ರದೇಶದ ಉಮರಿಯ ಜಿಲ್ಲೆಯಲ್ಲಿ ಅಸ್ತಿತ್ವದಲ್ಲಿರುವ ಬಾಂಧವಘರ್ ರಾಷ್ಟ್ರೀಯ ಉದ್ಯಾನವು ಹಚ್ಚ ಹಸುರಿನ ನಿಸರ್ಗ ಸೌಂದರ್ಯಕ್ಕೆ ಹೆಸರುವಾಸಿಯಾಗಿದೆ. ಹುಲಿ, ಆನೆ, ಕಾಡುಕೋಣ, ಜಿಂಕೆ, ಕರಡಿ, ವಿವಿಧ ಜಾತಿಯ ಪಕ್ಷಿಸಂಕುಲಗಳಂತಹ ಜೀವವೈವಿಧ್ಯಗಳಿಂದಾಗಿ ಇದು ವನ್ಯಜೀವಿ ಹಾಗೂ ಪ್ರಕೃತಿಪ್ರಿಯ ಪ್ರವಾಸಿಗರ ಜನಪ್ರಿಯ ವಿಹಾರ ತಾಣವೆನಿಸಿದೆ.

ಸದ್ರಿ ಉದ್ಯಾನದೊಳಡಗಿರುವ ಸಣ್ಣ ಬೆಟ್ಟವೊಂದರ ತಪ್ಪಲಿನಲ್ಲಿ 'ಶೇಷಶಯ್ಯ' ಎಂಬ ಶಿಲಾವಿಗ್ರಹವು ಅತ್ಯಾಕರ್ಷಕವಾಗಿದ್ದು, ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ಸುರುಳಿ ಸುತ್ತಿರುವ ಏಳು ಹೆಡೆಯ ಶೇಷನಾಗನ ಮೇಲೆ ಶಾಂತ ಮುದ್ರಾ ಭಂಗಿಯಲ್ಲಿ ಪವಡಿಸಿರುವ ಭಗವಾನ್ ವಿಷ್ಣು ದೇವರ ಬೃಹತ್ ವಿಗ್ರಹವಿದಾಗಿದೆ. ಮರಳುಗಲ್ಲಿನಲ್ಲಿ ರಚಿಸಲ್ಪಟ್ಟಿರುವ ಈ ಮೂರ್ತಿಯು ಒಂದು ಸಾವಿರ ವರ್ಷಗಳಿಗಿಂತಲೂ ಅಧಿಕ ಪುರಾತನವೆನಿಸಿದ್ದು ಸುಮಾರು 35 ಅಡಿಗಳಷ್ಟು ಉದ್ದವಾಗಿದೆ. ಇದನ್ನು ಒಂದೇ ಶಿಲೆಯಲ್ಲಿ ನಿರ್ಮಿಸಿರುವುದು ವಿಶೇಷ. ವಿಗ್ರಹದ ತಲೆಭಾಗವು ಪೂರ್ವ ದಿಕ್ಕಿಗೆ ಹಾಗೂ ಕಾಲುಗಳು ಪಶ್ಚಿಮಕ್ಕೆ ಹರಡಿಕೊಂಡಿದ್ದು 'ಚರಣ ಗಂಗಾ' ಎಂಬ ನೈಸರ್ಗಿಕ ನೀರಿನ ಝರಿಯು ಸದಾ ಚಿಮ್ಮುತ್ತಿದೆ. ಪ್ರವಾಸಿಗರು ಕೆಲವು ಮೆಟ್ಟಿಲುಗಳನ್ನೇರಿದರೆ, ತರಗೆಲೆಗಳಿಂದ ಸುತ್ತುವರೆದು ಪಾಚಿಕಟ್ಟಿರುವ ವಿಗ್ರಹದ ಸಂಕೀರ್ಣ ಕೆತ್ತನೆಯನ್ನು ಗಮನಿಸಬಹುದಾಗಿದೆ. ಸುತ್ತಮುತ್ತ ಇನ್ನೂ ಅನೇಕ ಪುರಾತನ ಮಂದಿರಗಳನ್ನೂ, ಪಳೆಯುಳಿಕೆಗಳನ್ನೂ ಕಾಣಬಹುದಾಗಿದ್ದು, ಭಕ್ತಾದಿಗಳಿಗೆ ಇದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರವೂ ಆಗಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

# ದೇವರ ಬುಟ್ಟಿ

ದೇವರಿಗೆ ಸಂಬಂಧಪಟ್ಟ ಪೂಜಾ ಸಾಮಗ್ರಿಗಳು, ಆಯುಧಗಳು, ದೇವಸ್ಥಾನಕ್ಕೆ ಸಂಬಂಧಿಸಿದ ವಸ್ತುಗಳನ್ನು ಈ ಬುಟ್ಟಿಯಲ್ಲಿ ಹಾಕಿ ಭದ್ರವಾಗಿಡುವುದರಿಂದ ಇದನ್ನು ದೇವರ ಬುಟ್ಟಿ ಎಂದೇ ಕರೆಯುತ್ತಾರೆ. ಆಗುಂಬೆ ಸಮೀಪದ ಹೊಸಂಗಡಿ ಎಂಬ ಸಣ್ಣ ಊರಿನವರಾದ ಕೃಷ್ಣಮೂರ್ತಿಯವರ ಅದ್ಭುತ ಕೈಚಳಕದಿಂದ ತಯಾರಾದ ಬುಟ್ಟಿಯಿದು. ಕೆಲವು ವರ್ಷಗಳ ಹಿಂದೆ ಇದರ ತಯಾರಿಕೆಗೆ ಬೇಕಾದ ವಾಟೆ ಬೆತ್ತ, ಬಿದಿರುಗಳು ಕಾಡಿನಲ್ಲಿ ಹೇರಳವಾಗಿ ಸಿಗುತ್ತಿದ್ದವು. ಮಳೆ, ಚಳಿ, ಕಲ್ಲು, ಮುಳ್ಳು ಲೆಕ್ಕಿಸದೆ ಕಾಡಿನಿಂದ ತಂದು ಬೇಕಾದ ಅಳತೆಯ ಸಲಕುಗಳನ್ನು ಸಿದ್ಧ ಮಾಡಿಕೊಂಡು ಬುಟ್ಟಿ ಹೆಣೆಯುತ್ತಿದ್ದರು.

ದೇವರ ಬುಟ್ಟಿಯಾದ್ದರಿಂದ ಅದಕ್ಕೆಂದೇ ನಿರ್ದಿಷ್ಟವಾದ ಅಳತೆ ಇರಬೇಕೆಂಬ ನಿಯಮವಿದೆ. ಹಾಗಾಗಿ ಒಂದು ಬುಟ್ಟಿ ಹೆಣೆಯಲು ಬಹಳ ಸಮಯ ತೆಗೆದುಕೊಳ್ಳುತ್ತದೆ. ದೂರದ ಊರುಗಳಿಂದ ಬಂದು ಒಂದೆರಡು ತಿಂಗಳ ಮುಂಚಿತವಾಗಿಯೇ ಬುಟ್ಟಿಗೆ ಮುಂಗಡಕೊಟ್ಟು ಕಾಯ್ದಿರಿಸುತ್ತಿದ್ದರು. ಇನ್ನು ಕೆಲವರು ಬೇರೆ ಊರುಗಳಿಗೆ ಇವರನ್ನೇ ಕರೆದುಕೊಂಡು ಹೋಗಿ ದೇವಸ್ಥಾನಕ್ಕೆ ದೇವರ ಬುಟ್ಟಿಯನ್ನು ಮಾಡಿಸಿಕೊಳ್ಳುತ್ತಿದ್ದರು. ಈಗ ಇದಕ್ಕೆ ಬೇಕಾದ ಮೂಲ ವಸ್ತುಗಳು ಸಿಗದ ಕಾರಣ, ಇಂತಹ ಅಪರೂಪದ ಕಲೆಗಳು ಹಳ್ಳಿಗಳಲ್ಲಿ ಕಣ್ಮರೆಯಾಗುತ್ತಿವೆ. ಯಾವ ತರಬೇತಿಯಿಲ್ಲದೆ ಇಂತಹ ವಿಶಿಷ್ಟ ಕಲೆಯನ್ನು ಕೃಷ್ಣಮೂರ್ತಿಯವರು ಕರಗತ ಮಾಡಿಕೊಂಡಿದ್ದರೆ.

—ಜಯಂತಿ ರಾಘವೇಂದ್ರ, ಆಗುಂಬೆ

